ಸರ್ಕಾರವು 14 ಸಂಸ್ಥೆಗಳಿಗೆ 60 ಮೆ.ವ್ಯಾ.ನಷ್ಟು ಸಾಮರ್ಥ್ಯವನ್ನು ಖಾಸಗೀಯವರಿಗೆವಹಿಸಿ ಕೊಡಲಾಗಿದೆ. ಬಾಕಿ ಸಾಮರ್ಥ್ಯವನ್ನು ಜಂಟೀ ಕ್ಷೇತ್ರದಲ್ಲಿ ಮತ್ತು ಖಾಸಗೀ ಕ್ಷೇತ್ರದಲ್ಲಿ ತೆಗೆದುಕೊಳ್ಳಲು ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದೆ.

ವಿಷಯ:ಪಡಿತರ ಚೀಟಿ ಮೂಲಕ ರಾಜ್ಯದಲ್ಲಿ ರಾಗಿ ಮತ್ತು ಜೋಳವನ್ನು ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:132(441)

ಶ್ರೀ. ಡಿ.ಆರ್. ಪಾಟೀಲ್ (ಗದಗ್)

ಮಾನ್ಯ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿ ಉತ್ತರ ಕರ್ನಾಟಕದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜೋಳ ಹಾಗೂ ಹಳೇ ಮೈಸೂರು ಭಾಗದಲ್ಲಿ ರಾಗಿಯನ್ನು ಜನತೆ ಮುಖ್ಯ ಆಹಾರವಾಗಿ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ.

ಆ) ಹಾಗಿದ್ದಲ್ಲಿ, ಸರ್ಕಾರದವರು ತನ್ನ ಪಡಿತರ ವಿತರಣೆಯಲ್ಲಿ ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಜೋಳ ಹಾಗೂ ಉಳಿದ ಭಾಗದಲ್ಲಿ ರಾಗಿಯನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳುವರೆ?

ಶ್ರೀ. ಎಸ್. ನಂಜಪ್ಪ
ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.

ಅ) ಹೌದು.

ಆ) 1994-95ರ ಸಾಲಿಗೆ ಕೇಂದ್ರ ಸರ್ಕಾರವು ಜೋಳ ಹಾಗೂ ರಾಗಿಯ ಬೆಂಬಲ ಬೆಲೆಯನ್ನು ಪ್ರತಿ ಕ್ವಿಂಟಾಲಿಗೆ ರೂ.280.00ರಂತೆ ನಿಗದಿಸಿದೆ. ಇದಕ್ಕೆ ಹೆಚ್ಚುವಾರಿಯಾಗಿ ರಾಜ್ಯ ಸರ್ಕಾರವು ಪ್ರತಿ ಕ್ವಿಂಟಾಲಿಗೆ ರೂ. 45.00ರ ಉತ್ಪಾದನಾ ಪ್ರೋತ್ಸಾಹ ಧನವನ್ನು ನೀಡಿದೆ. ಬೆಂಬಲ ಬೆಲೆ ಕಾರ್ಯಾಚರಣೆಯಲ್ಲಿ ಜೋಳ ಮತ್ತು ರಾಗಿಯ ಖರೀದಿ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ. 325.00 ಆಗಿದೆ. ಮುಕ್ತಮಾರುಕಟ್ಟೆಯಲ್ಲಿ ಜೋಳದ ಮಾರಾಟ ಬೆಲೆ ಬೆಂಬಲ ಬೆಲೆಗಿಂತ ಕಡಿಮೆ ಆದಲ್ಲಿಮಾತ್ರ ಸರ್ಕಾರವು ಈ ಯೋಜನೆಯಡಿಯಲ್ಲಿ ಖರೀದಿಯ ಕಾರ್ಯಾಚರಣೆ ನಡೆಸುತ್ತಿದೆ. ಹಾಗೂ ಸಂಗ್ರಹಿತ ಜೋಳ : ರಾಗಿಯನ್ನು ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಪಡಿತರ ಚೀಟಿದಾರರಿಗೆ ವಿತರಿಸಲಾಗುತ್ತಿದೆ. ಜೋಳ ಹಾಗೂ ರಾಗಿಯ ಮಾರಾಟ ಬೆಲೆ ಬೆಂಬಲ ಬೆಲೆಗಿಂತ ಹೆಚ್ಚಾಗಿದ್ದುದರಿಂದ ಬೆಂಬಲ ಬೆಲೆ

ಕಾರ್ಯಾಚರಣೆಗೆ ಅವಕಾಶವಿರುವುದಿಲ್ಲ. ಆದುದರಿಂದ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಜೋಳ ಹಾಗೂ ರಾಗಿಯನ್ನು ಕಡಿಮೆ ಬೆಲೆಗೆ ವಿತರಿಸುವುದು ಸಾಧ್ಯವಾಗುವುದಿಲ್ಲ.

ವಿಷಯ:ಪಂಚಾಯತ್ ಕಾನೂನಿನನ್ವಯ ಸಾರ್ವಜನಿಕ ವಿತರಣಾ ವ್ಯವಸ್ಥೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 133(439)

ಮಾನ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವೆ.

ಅ) ಪಂಚಾಯತ್‌ರಾಜ್ಯ ಕಾನೂನಿನ ಅನ್ವಯ ಸಾರ್ವಜನಿಕ ವಿತರಣಾ ವ್ಯವಸ್ಥೆ ಗ್ರಾಮ ಪಂಚಾಯತ್‌ಗಳಿಗೆವಹಿಸಿದ್ದು, ಈವರೆಗೂ ಗ್ರಾಮ ಮಟ್ಟದಲ್ಲಿರುವ ಪಡಿತರ ವಿತರಕರು ಸರಿಯಾಗಿ ವಿತರಣೆ ಮಾಡದಿದ್ದರೆ ಕ್ರಮ ಕೈಗೊಂಡು ಬದಲಿ ವ್ಯವಸ್ಥೆ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಈ ಕ್ರಮ ಗ್ರಾಮ ಪಂಚಾಯಿತಿಗಳ ಹಕ್ಕು ಮೊಟಕುಗೊಳಿಸುವುದಿಲ್ಲವೇ.

ಇ) ಈ ಅಧಿಕಾರ ಚಲಾವಣೆ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡಲು ಇರುವ ಅಡ್ಡಿ ಏನು, ಹಾಗೂ ಗ್ರಾಮ ಪಂಚಾಯಿತಿಗಳ ಹಕ್ಕನ್ನು ಅವುಗಳಿಗೆ ವಹಿಸಿಕೊಡಲು ಕ್ರಮ ಕೈಗೊಳ್ಳುವುದೇ?

ಶ್ರೀ. ಎಂ.ಪಿ. ಪ್ರಕಾಶ್
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು.

ಅ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರನ್ವಯ ಅತ್ಯಾವಶ್ಯಕ ರಸಕುಗಳ ವಿತರಣೆಗೆ ಸಂಬಂಧಿಸಿದಂತೆ ಜನರಲ್ಲಿ ಜಾಗೃತ ಮೂಡಿಸುವುದು ಮತ್ತು ಸಾರ್ವಜನಿಕ ವಿತರಣೆ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ಮಾತ್ರ ಗ್ರಾಮ ಪಂಚಾಯಿತಿಗಳಿಗೆ ವಹಿಸಿದೆ.

ಆ) ಮೇಲೆ ನಮೂದಿಸಿರುವ ವ್ಯವಸ್ಥೆಯನ್ನು ಮೊಟಕುಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪಡಿತರ ವಿತರಣಾ ವ್ಯವಸ್ಥೆಯನ್ನು ತಾಲ್ಲೂಕು ಪಂಚಾಯಿತಿಗಳು ನಿರ್ವಹಿಸ ಬೇಕಾಗುತ್ತದೆ.